ಹಿರೇನಂದಿ ಏತ ನೀರಾವರಿ ಯೋಜನೆ

೧೫೬೫. ಶ್ರೀ ಎಂ. ಎಲ್. ಮುತ್ತಣ್ಣನವರು (ಗೋಕಾಕ್).—ಮಾನ್ಯ ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರೇನಂದಿ ಯಾತ ನೀರಾವರಿ ಯೋಜನೆ ಮಂಜೂರಾಗಿದ್ದು, ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಆ) ಈ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರ ವೆಷ್ಟು ?

ಇ) ಈ ಯೋಜನೆ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕೆಲಸದ ಯೋಜನಾ ವರದಿಯನ್ನು ಆರ್ಥಿಕ ಸಂಸ್ಥೆಗೆ ಸಲ್ಲಿಸಿದ್ದು, ಸಾಲ ಮಂಜೂರಾದ ನಂತರ, ತೆಗೆದುಕೊಳ್ಳಲಾಗುವುದು.

ಆ) ಸುಮಾರು ೧೫೫ ಹೆಕ್ಟೇರುಗಳು.

ಇ) ಸಾಲ ಮಂಜೂರಾದ ನಂತರ ಸುಮಾರು ಎರಡು ವರ್ಷಗಳು.

ಕನಸಗೇರಿ ಏತ ನೀರಾವರಿ ಯೋಜನೆ

೧೫೬೬. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್),—ಮಾನ್ಯ ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಸಗೇರಿ ಯಾತ ನೀರಾವರಿ ಕೆಲಸವನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು ?

ಆ) ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಇ) ಇದರಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು ಮತ್ತು ಯಾವ ಯಾವ ಗ್ರಾಮಗಳು ?

ಈ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು ?

ಉ) ಈ ಯೋಜನೆ ಮುಗಿಯಲು ಎಷ್ಟು ಅವಧಿ ಬೇಕಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಕಾಮಗಾರಿಯು ಬಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ನಿಯಮಿತದ ಪ್ರಸಕ್ತ ವಾರ್ಷಿಕ ಕಾರ್ಯಕ್ರಮದಲ್ಲಿ ಸೇರಿಲ್ಲ.

ಆ) ಮುಂಬರುವ ವಾರ್ಷಿಕ ಕಾರ್ಯಕ್ರಮದಲ್ಲಿ ಈ ಕಾಮಗಾರಿಯನ್ನು ಸೇರಿಸಿ, ಆರ್ಥಿಕ ಸಂಸ್ಥೆಯ ನೆರವು ದೊರೆತೊಡನೆ ತೆಗೆದುಕೊಳ್ಳಲಾಗುವುದು.

ಇ) ಮತ್ತು ಈ) ಅಂದಾಜನ್ನು ತಯಾರಿಸಲಾಗುತ್ತಿದೆ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಮುದ್ರಣಾಲಯಗಳು

೨೪೮೬. ಶ್ರೀ ಗೋಪಾಲ ಮಂಕೆಂದ ಕಾನಡೆ (ಸಿರ್ಸಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಸಂಖ್ಯೆ ಎಷ್ಟು ?

ಆ) ಇವುಗಳಿಗೆ ವರ್ಷಕ್ಕೆ ಖರ್ಚಾಗುವ ಹಣವೆಷ್ಟು ?